# ಪ್ರಾಜೆಕ್ಟ್‌ಗಳಿವೆ, ಕೈಗೆ ಹತ್ತುತ್ತಿಲ್ಲ




2021ನ್ನು ಹೇಗೆ ಹೇಳಬೇಕು ಗೊತ್ತಾಗುತ್ತಿಲ್ಲ. ಸಾಕಷ್ಟು ಪ್ರಾಜೆಕ್ಟ್‌ಗಳಿವೆ. ಇನ್ನೂ ಸಾಕಷ್ಟು ಪ್ರಾಜೆಕ್ಟ್‌ಗಳು ಬರುತ್ತಿವೆ. ಆದರೆ ಯಾವುದೂ ಪೂರ್ತಿಯಾಗಿ ಕೈಗೆ ಹತ್ತಲಿಲ್ಲ.

ಜನವರಿ ತಿಂಗಳಲ್ಲಿಯೇ 'ಬೆಲ್ ಬಾಟಂ 2' ಮುಹೂರ್ತ ಆಯಿತು. ಪ್ರಿ ಪ್ರೊಡಕ್ಷನ್ ಮುಗಿದು ಇನ್ನೇನು ಚಿತ್ರೀಕರಣ ಆರಂಭವಾಗಬೇಕು ಅನ್ನುವ ಹೊತ್ತಿಗೆ ಕೊರೊನಾ ಜಾಸ್ತಿ ಆಯಿತು. ಮತ್ತೆ ಎಲ್ಲ ಕೆಲಸಗಳನ್ನೂ ನಿಲ್ಲಿಸಿ ಮನೆಯಲ್ಲಿಯೇ ಕೂರಬೇಕಾಯಿತು. ಮನೆಯಲ್ಲಿಯೇ ಏನೇನೋ ಯೋಚನೆ ಮಾಡುತ್ತ, ಬರೆಯುತ್ತಾ ಇದ್ದೆ. ಕೊರೊನಾ ನಿರ್ಬಂಧಗಳು ಸಡಿಲವಾಗುವ ಹೊತ್ತಿಗೆ 'ಬನಾರಸ್' ಸಿನಿಮಾವನ್ನು ಹಲವು ಭಾಷೆಗಳಲ್ಲಿ ಭಾರತದಾದ್ಯಂತ ಬಿಡುಗಡೆ ಮಾಡಬೇಕು ಎಂಬ ನಿರ್ಧಾರವಾಯ್ತು. ಅದರ ಕೆಲಸಗಳಲ್ಲಿ ಮುಳುಗಿಹೋದೆ.

ಈ ನಡುವೆ ನಿರ್ಮಾಪಕ ಉಮಾಪತಿ ಅವರು ಸಂಪರ್ಕಿಸಿ, ಪುನೀತ್ ರಾಜ್‌ಕುಮಾರ್ ಅವರಿಗೆ ಒಂದು ಕಥೆ ಹೇಳಿ ಎಂದು ಕೇಳಿಕೊಂಡರು. ಸೆಪ್ಟೆಂಬರ್ 27ಕ್ಕೆ ಅಪ್ಪು ಅವರನ್ನು ಭೇಟಿ ಮಾಡಿ ಕಥೆ ಹೇಳಿದೆ. ಕಥೆ ಕೇಳಿ ತುಂಬ ಇಷ್ಟಪಟ್ಟರು. ಇನ್ನಷ್ಟು ವಿವರವಾಗಿ ಬರೆದುಕೊಂಡು ಬನ್ನಿ. ಎರಡು ತಿಂಗಳ ಸಮಯ ತೆಗೆದುಕೊಳ್ಳಿ ಎಂದು ಹೇಳಿದ್ದರು. ಆ ಕಥೆ ಸಿದ್ಧಪಡಿಸುವ ಹೊತ್ತಿಗೆ ಅವರೇ ತೀರಿಕೊಂಡರು. ಅವರ ಸಮಾಧಿ ಮುಂದೆಯೇ ನಾವು 'ಬನಾರಸ್' ಸಿನಿಮಾ ಮೋಷನ್ ಪೋಸ್ಟರ್ ಬಿಡುಗಡೆ ಮಾಡಿದೆವು. ಅದಕ್ಕೆ ಅದ್ಭುತವಾದ ಸ್ಪಂದನ ಸಿಕ್ಕಿತು. ಈಗ ಒಂದು ಹಾಡನ್ನು ಬಿಡುಗಡೆ ಮಾಡುವ ಸಿದ್ಧತೆಯಲ್ಲಿದ್ದೇವೆ.

ಈಗ ಮೂರು ನಾಲ್ಕು ನಿರ್ಮಾಪಕರ ಜೊತೆಗೆ ಮಾತುಕತೆ ನಡೆದಿದೆ. ಯಾವ ಸಿನಿಮಾ ಮೊದಲು ಪ್ರಾರಂಭವಾಗುತ್ತದೆ ಗೊತ್ತಿಲ್ಲ. ಜನವರಿಯಲ್ಲಿಯೇ ನಿಂತುಹೋಗಿರುವ 'ಬೆಲ್ ಬಾಟಂ 2' ಇನ್ನೂ ಪ್ರಾರಂಭವಾಗಿಲ್ಲ. ಹೀಗೆ ಎಷ್ಟೆಲ್ಲ ಕೆಲಸಗಳನ್ನು ಮೈಮೇಲೆ ಎಳೆದುಕೊಂಡು ಯಾವುದೂ ಕೈಗೂಡದೆಯೇ ಈ ವರ್ಷ ಮುಗಿದುಹೋಗುತ್ತಿದೆ. ಮುಂದಿನ ವರ್ಷದ ಮೇಲೆ ನಂಬಿಕೆ ಇಟ್ಟು ಕಾಯುತ್ತಿದ್ದೇನೆ.

**-ಜಯತೀರ್ಥ, ನಿರ್ದೇಶಕ**



ಪರದಾಡುತ್ತಿದ್ದ ದಿನಗೂಲಿ ಕಾರ್ಮಿಕರಿಗೆ ಮತ್ತೆ ಕರೆಗಳು ಹೋಗಲಾರಂಭಿಸಿದ್ದವು. ನಿರ್ದೇಶಕರ ಪೆನ್ನು ಚಿತ್ರಕಥಾ ಹಾಳೆಯ ಮೇಲೂ ನಿರ್ಮಾಪಕರ ಪೆನ್ನು ಚೆಕ್‌ಗಳ ಮೇಲೂ ಜೋರು ಓಡಲಾರಂಭಿಸಿದ್ದವು.

ಒಟ್ಟಾರೆ ಇಡೀ ಚಿತ್ರರಂಗ ಸುದೀರ್ಘ ಕಡ್ಡಾಯ ರಜೆಯನ್ನು ಮುಗಿಸಿಬಂದು, ನಿರಾಳ ನಿಟ್ಟುಸಿರು ಹೊರಚೆಲ್ಲಿ ಹೊಸ ಉತ್ಸಾಹದೊಂದಿಗೆ ಮತ್ತೊಂದು 'ಆಟ'ಕ್ಕೆ ಸಜ್ಜಾಗುತ್ತಿತ್ತು. 'ಜನ ಒಟಿಟಿಯಲ್ಲಿ ಸಿನಿಮಾ ನೋಡಿ ನೋಡಿ ಬೇಸತ್ತಿದ್ದಾರೆ. ಒಂದು ದೊಡ್ಡ ಸಿನಿಮಾ ಬರಲಿ, ಮೈಚಳಿ ಬಿಟ್ಟು ಚಿತ್ರಮಂದಿರಕ್ಕೆ ನುಗ್ಗುತ್ತಾರೆ ನೋಡುತ್ತಿರಿ' ಎಂಬ ವಿಶ್ವಾಸದ ಮಾತುಗಳು ಗಾಂಧಿನಗರದ ಒಳರಸ್ತೆಗಳಲ್ಲಿ ಕೇಳಲಾರಂಭಿಸಿದ್ದವು.

ಆದರೆ 2021ರ ಜನವರಿಯಲ್ಲಿ ಅಂಥ 'ದೊಡ್ಡ ಸಿನಿಮಾ' ಯಾವುದೂ ಬರಲಿಲ್ಲ. ಖಾಲಿ ಮೈದಾನಲ್ಲಿ 'ಖುಷಿ'ಗಾಗಿ ಒಂದಿಷ್ಟು ಆಟಗಾರರು ಆಡಿಕೊಂಡು ಹೋದರಷ್ಟೆ.

ಈ ಸಲದ ಸಿನಿಮಾ ವರ್ಷ ಆರಂಭವಾಗಿದ್ದು ರಾಘವೇಂದ್ರ ರಾಜ್‌ಕುಮಾರ್ ಅವರು ಮುಖ್ಯಪಾತ್ರದಲ್ಲಿ ನಟಿಸಿದ 'ರಾಜತಂತ್ರ' ಸಿನಿಮಾ ಮೂಲಕ. ತೀವ್ರ ಅನಾರೋಗ್ಯದಿಂದ ಚೇತರಿಸಿಕೊಂಡು ಸಿನಿಮಾ ಮಾಡುವಷ್ಟು ಚೈತನ್ಯವನ್ನೂ ಗಳಿಸಿಕೊಂಡು, ಬಣ್ಣ ಹಚ್ಚಿ ಕನ್ನಡಿಗರ ಎದುರು ನಿಂತಿದ್ದ ರಾಘಣ್ಣ, ಕೃಶಗೊಂಡ ಚಂದನವನದ ದಾರಿಯಲ್ಲಿನ 'ಹೋಪ್'ಗೆ ಒಂದು ರೂಪಕವಾಗಿ ಕೆಲವರಿಗಾದರೂ ಕಂಡಿರಲಿಕ್ಕೆ ಸಾಕು. ಆದರೆ ರಾಘವೇಂದ್ರ ರಾಜ್‌ಕುಮಾರ್ ವ್ಯಕ್ತಿತ್ವದಲ್ಲಿದ್ದ ಈ 'ಹೋಪ್' ಚಿತ್ರಕ್ಕೆ ಗೆಲುವಿನ ಬಲವನ್ನೇನೂ ಕೊಡಲಿಲ್ಲ.

ವರ್ಷದ ಎರಡನೇ ಶುಕ್ರವಾರ 'ಅಮೃತವಾಹಿನಿ' ಮತ್ತು 'ಮಹಿಷಾಸುರ' ಎಂಬ ಎರಡು ಚಿತ್ರಗಳು ಬಿಡುಗಡೆಗೊಂಡವು. ಬೇರೆ ಬೇರೆ ಪ್ರೇಕ್ಷಕವರ್ಗಕ್ಕಾಗಿಯೇ ರೂಪುಗೊಂಡ ಆ ಎರಡು ಸಿನಿಮಾಗಳಲ್ಲಿ ಒಂದನ್ನೂ ಪ್ರೇಕ್ಷಕ ಎತ್ತಿ ಮೆರೆಸಲಿಲ್ಲ.

ಜನವರಿ ತಿಂಗಳಲ್ಲಿ ಒಟ್ಟೂ ಹತ್ತು ಸಿನಿಮಾಗಳು ಬಿಡುಗಡೆಗೊಂಡವು. ಆದರೆ ಶೇ. 50ರಷ್ಟು ಪ್ರೇಕ್ಷಕರಿಗೆ ಮಾತ್ರ ಅವಕಾಶ ಎಂಬ ನಿರ್ಬಂಧದ ಅಗತ್ಯವೇ ಇಲ್ಲದಂತೆ ಚಿತ್ರಮಂದಿರಗಳು ಖಾಲಿ ಹೊಡೆದುಕೊಂಡಿದ್ದವು. ಹಳೆಯ ಹಿಟ್ ಸಿನಿಮಾಗಳನ್ನೇ ಮತ್ತೆ ಪ್ರದರ್ಶಿಸಿ ಪ್ರೇಕ್ಷಕರನ್ನು ಸೆಳೆಯಲು ಮಾಡಿದ ಪ್ರಯತ್ನ ಕೂಡ ಫಲ ಕೊಡಲಿಲ್ಲ.

ಜನವರಿ ತಿಂಗಳು ತುಸು ನಿರಾಶಾದಾಯಕವಾಗಿ ಇತ್ತೆಂಬುದೇನೋ ನಿಜ. ಆದರೆ ಮುಂದಿನ ತಿಂಗಳುಗಳ ತಿರುವಿನಾಚೆಗೆ ಸ್ಟಾರ್ ಸಿನಿಮಾಗಳ ಬರವಿನ ಪಟಾಕಿಯ ಸದ್ದು ಆಗಲೇ ಕೇಳಲಾರಂಭಿಸಿತ್ತು. ಹಾಗಾಗಿ ಇಲ್ಲಿ ನಿಂತು ಮುಂದೆ ನೋಡುತ್ತ ಆಸೆಗಣ್ಣಿನಿಂದ ನಿಲ್ಲುವ ಮೆಟ್ಟಿಲಾಗಿ ಜನವರಿ ತಿಂಗಳು ರೂಪುಗೊಂಡಿತೆನ್ನಬಹುದು.

ಚಿತ್ರರಂಗದ ವಿಶ್ವಾಸ ಸಾಕಷ್ಟು ಹೆಚ್ಚಾಗಿದೆಯೆನ್ನುವುದಕ್ಕೆ ಪುರಾವೆಯೆಂಬಂತೆ ಫೆಬ್ರುವರಿಯಲ್ಲಿ ಇಪ್ಪತ್ತೆಂಟು ದಿನಗಳಲ್ಲಿ ಮೂವತ್ತು ಸಿನಿಮಾಗಳು ಸಾಲಾಗಿ ಚಿತ್ರಮಂದಿರಕ್ಕೆ ನುಗ್ಗಿದವು. ಫೆಬ್ರುವರಿ ಮೊದಲ ವಾರವೇ, ಪ್ರಜ್ವಲ್ ದೇವರಾಜ್ ಅವರ 'ಇನ್‌ಸ್ಪೆಕ್ಟರ್ ವಿಕ್ರಮ್' ಸೇರಿದಂತೆ ಐದು ಸಿನಿಮಾ ಬಿಡುಗಡೆಯಾದವು. ಆದರೆ ಅವ್ಯಾವವೂ ಹೇಳಿಕೊಳ್ಳುವಂಥ ಸದ್ದನ್ನೇನೂ ಮಾಡಲಿಲ್ಲ. ಆಗಲೇ ಧ್ರುವ ಸರ್ಜಾ ಅವರು ಕೂದಲು ಬಿಟ್ಟುಕೊಂಡು ಭುಜ ಕುಣಿಸಿಕೊಂಡು ಬುಲ್ಡೋಜರ್‌ನಂತೆ ಬರುತ್ತಿರುವ ಸದ್ದಿನ ನಡುವೆ ಈ ಸಿನಿಮಾಗಳ ಧ್ವನಿ ಉಡುಗಿಹೋಗಿರಲಿಕ್ಕೂ ಸಾಕು.

### 'ಪೊಗರು' ಗೆಲುವಿನ ನಗು

ರಶ್ಮಿಕಾ ಮಂದಣ್ಣ ಮತ್ತು ಧ್ರುವ ಸರ್ಜಾ ನಟಿಸಿದ್ದ 'ಪೊಗರು' ಸಿನಿಮಾ, ಚಿತ್ರಮಂದಿರಗಳಲ್ಲಿ ಪ್ರೇಕ್ಷಕನ



'ಸಲಗ' ಸಿನಿಮಾದಲ್ಲಿ ದುನಿಯಾ ವಿಜಯ್